 **ಎಂವಿಸಿಃ 1272/2022 ಪಿಡಬ್ಲ್ಯುಃ 2 ಡಾಃ ನಂದೀಶ್ ಕುಮಾರ್ ಕೆ ಸಿ ಸಾಕ್ಷಿಯನ್ನು ದಿಃ 21.11.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎನ್ ಬಿ ಆರ್ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ ಮತ್ತು ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ಅರ್ಜಿದಾರರಿಗೆ ಸಂಬಂಧಿಸಿದ ಎರಡು ಕೇಸ್ ಶೀಟನ್ನು ನಿಪಿ. 15 ಮತ್ತು 16 ಎಂದು, ಒಂದು ಒಪಿ ದಾಖಲೆಯನ್ನು ನಿಪಿ. 17 ಎಂದು, ಒಟ್ಟು 11 ಎಕ್ಸ್ ರೇ ಫಿಲಂಗಳನ್ನು ಒಟ್ಟಾಗಿ ನಿಪಿ. 18 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಬಿ ಜಿ ಕೆ ವಕೀಲರಿಂದ**

ಅರ್ಜಿದಾರರು ಪ್ರಥಮ ಬಾರಿಗೆ ನಮ್ಮ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಸುತ್ತೋಲೆಯನ್ವಯ ಫಾರಂ ಎ ಮತ್ತು ಬಿ ನಲ್ಲಿ ನನಗೆ ಅಂಗನ್ಯೂನ್ಯತೆ ನಿರ್ಧರಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಎರಡೂ ಅಂಗಗಳಿಗೆ ಪ್ರತ್ಯೇಕ ಅಂಗನ್ಯೂನ್ಯತೆ ನಿರ್ಧರಿಸಿದ್ದು ಇದನ್ನು ಕ್ರೋಢೀಕರಿಸಿ ಹೇಳಲು ತೊಂದರೆ ಇರಲಿಲ್ಲ ಎಂದರೆ ಸುತ್ತೋಲೆಯಲ್ಲಿ ಅವುಗಳನ್ನು ಕ್ರೋಢೀಕರಿಸಿ ನಿರ್ಧರಿಸಲು ಮಾರ್ಗಸೂಚಿ ಇರುವುದಿಲ್ಲ. ಕ್ರೋಢೀಕರಿಸಿ ನಿರ್ಧರಿಸಿದ ಅಂಗನ್ಯೂನ್ಯತೆ ಪ್ರಮಾಣ ಕಡಿಮೆ ಆಗುತ್ತದೆ ಎಂದು ಅದನ್ನು ಸೂತ್ರ ಬಳಸಿ ನಿರ್ಧರಿಸಿಲ್ಲ ಎಂದರೆ ಸರಿಯಲ್ಲ.

2) ಕ್ಲಿನಿಕಲ್ ಪರೀಕ್ಷೆ ಮಾತ್ರ ಆಶ್‌ವರ್ಡ್ ಗ್ರೇಡಿಂಗ್ ಆಧಾರದ ಮೇಲೆ ಲಾಸ್ ಆಫ್ ಹಿಪ್ ಜಾಯಿಂಟ್ ನಿರ್ಧರಿಸಿದ್ದೇನೆ. ಸುತ್ತೋಲೆಯ ಪ್ರಕಾರ ಆವರೇಜ್ ಲಾಸ್ ಆಫ್ ಪವರ್ 20 ಪರ್ಸೆಂಟ್ ಗುಡ್ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ಕ್ಲಿನಿಕಲ್ ಪರೀಕ್ಷೆ ಹಾಗೂ ಗೊನಿಯೋಮೀಟರ್ ಆಧಾರದ ಮೇಲೆ ಲಾಸ್ ಆಫ್ ಆರ್ ಒ ಎಂ ನಿರ್ಧರಿಸಿದ್ದೇನೆ. ಮೂಳೆಯ ಶಕ್ತಿ ಹೆಚ್ಚಿಸಲು ಫಿಜಿಯೋಥೆರಪಿಗೆ ಸಲಹೆ ನೀಡುತ್ತೇವೆ ಎಂದರೆ ಸರಿ. ಮೂಳೆ ಶಕ್ತಿ ಹೆಚ್ಚಿಸಲು ಕುಕ್ಕರು ಗಾಲಿನಲ್ಲಿ ಕೂರಲು ಸಲಹೆಗಳನ್ನು ನಾವು ನೀಡುವುದಿಲ್ಲ. ಸ್ಟೆಬಿಲಿಟಿ ಕಾಂಪೋನೆಂಟ್‌ಗೆ ಗರಿಷ್ಠ 90 ಪರ್ಸೆಂಟ್ ನೀಡಬಹುದು. ಸ್ಟೆಬಿಲಿಟಿ ಕಾಂಪೋನೆಂಟ್ 20

ಪರ್ಸೆಂಟ್ ನಿರ್ಧರಿಸಿದ್ದೇನೆ ಎಂದರೆ ಸರಿ. ಒಂಬತ್ತು ಕಾಂಪೋನೆಂಟ್ ಪೈಕಿ ಏಳು ಚೆನ್ನಾಗಿರುತ್ತದೆ ಮತ್ತು ಎರಡಕ್ಕೆ ಮಾತ್ರ ತೊಂದರೆ ಇರುವುದರಿಂದ 20 ಪರ್ಸೆಂಟ್ ನೀಡಿದ್ದೇನೆ.

3) ಅರ್ಜಿದಾರರ ಕೈನ ಅಳವಡಿಕೆಗಳನ್ನು ತೆಗೆಯಲಾಗಿದೆ. ನಡುವಿಗೆ ಹಾಕಲಾಗಿದ್ದ ಅಳವಡಿಕೆಗಳನ್ನು ತೆಗೆದಿರುವುದಿಲ್ಲ. ಮೂಳೆ ಮುರಿತ ಕೂಡಿಕೊಂಡಿದೆ ಎಂದರೆ ಸರಿ. ಪೆಲ್ವಿಕ್ ಮೂಳೆ ಕೂಡಿಕೊಳ್ಳಲು ಕನಿಷ್ಠ ಮೂರು ತಿಂಗಳ ಅವಧಿ ಬೇಕಾಗುತ್ತದೆ. ಎಲ್ಬೋ ಮೂಳೆಗೆ ಆವರೇಜ್ ಲಾಸ್ ಅಫ್ ಪವರ್ 20 ಪರ್ಸೆಂಟ್ ನೀಡಿದ್ದೇನೆ ಎಂದರೆ ಸರಿ. ಅರ್ಜಿದಾರರು ವೆಲ್ಡಿಂಗ್ ಕೆಲಸ ಮಾಡುವುದಾಗಿ ಹೇಳಿರುತ್ತಾರೆ. ಅರ್ಜಿದಾರರ ಮುಂದಿನ ಚಿಕಿತ್ಸೆಗೆ ಎಪ್ಪತ್ತೈದು ಸಾವಿರ ಹಣದ ಅವಶ್ಯಕತೆ ಇರುವ ಬಗ್ಗೆ ಕೊಟೇಶನ್ ಹಾಜರುಪಡಿಸಿಲ್ಲ ಎಂದರೆ ಸರಿ. ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಅಳವಡಿಕೆಗಳನ್ನು ತೆಗೆಸಬಹುದು ಎಂದರೆ ಈ ಬಗ್ಗೆ ಸೌಲಭ್ಯ ಇದೆಯೋ ಇಲ್ಲವೋ ನನಗೆ ಮಾಹಿತಿ ಇಲ್ಲ, ಪ್ರತಿ ಆಸ್ಪತ್ರೆಯ ವೆಚ್ಚದಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ಅಳವಡಿಕೆ ತೆಗೆಸಲು ನಾನು ಸಲಹೆ ನೀಡಿದ್ದೇನೆ ಎಂದರೆ ಸರಿ. ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಪಡೆಯಲು ಸಹಾಯವಾಗುವಂತೆ ಹೆಚ್ಚಿನ ಅಂಗನ್ಯೂನ್ಯತೆ ಪ್ರಮಾಣವನ್ನು ನಿರ್ಧರಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಪ್ರಧಾನ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.